## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.1091/2021

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಕೃಷ್ಣ | ಸಿಡಬ್ಲ್ಯೂ-4 |
| ತಂದೆಯ ಹೆಸರು | – | ಕುರಿಭೂತಣ್ಣ | ಪಿಡಬ್ಲ್ಯೂ-5 |
| ವಯಸ್ಸು | – | 30 ವರ್ಷ | |
| ಉದ್ಯೋಗ | – | ಚಾಲಕ | |
| ವಾಸ | – | ದಿಂಡಾವರ ಗ್ರಾಮ | |

**ದಿನಾಂಕಃ 01.07.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

### ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ

ನನಗೆ ಚಾಸಾ.1 ರವರು ಗೊತ್ತು. ಚಾಸಾ.2 ರವರು ಗೊತ್ತು ಅವರು ಈಗ ಮರಣ ಹೊಂದಿರುತ್ತಾರೆ. ಚಾಸಾ.3, 5 ರವರು ಗೊತ್ತಿಲ್ಲ. ನನಗೆ ಆರೋಪಿತರು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಘಟನೆ ಕಣ್ಣಾರೆ ನೋಡಿಲ್ಲ. ನಾನು ಯಾವುದೇ ಜಗಳ ಬಿಡಿಸಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

### ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

ದಿಃ01.06.2020 ರಂದು ನಾನು ಮತ್ತು ಚಾಸಾ.3 ರವರು ಚಾಸಾ.1 ರವರ ಮನೆಯ ಹತ್ತಿರ ರಸ್ತೆ ಬದಿಯಲ್ಲಿ ಮಾತನಾಡುತ್ತಿರುವಾಗ ಸಾಯಂಕಾಲ 7 ಗಂಟೆ ಸಮಯದಲ್ಲಿ ಚಾಸಾ.1 ರವರ ಮನೆಯ ಹತ್ತಿರ ಗಲಾಟೆಯಾಗುತ್ತಿದ್ದು ನಾನು ಮತ್ತು ಚಾಸಾ.3 ರವರು ಹೋಗಿ ನೋಡಿದೆವು ಎಂದರೆ ಸರಿಯಲ್ಲ. ಚಾಸಾ.1 ರವರಿಗೆ 1 ನೇ ಆರೋಪಿ ಏಕಾ ಏಕಿ ಬಂದು ಬೋಳಿಮಗನೇ ಸೂಳೆ ಮಗನೇ ಎಂದು ಬೈದಾಡಿದ್ದು ಚಾಸಾ.1 ರವರು ಏಕೆ ಬೈದಾಡುತ್ತೀಯ

ಎಂದು ಕೇಳಿದ್ದಕ್ಕೆ 1 ನೇ ಆರೋಪಿ ಕೈಗಳಿಂದ ಅವರ ಕಪಾಳಕ್ಕೆ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ಅಷ್ಟರಲ್ಲಿ 2 ರಿಂದ 4 ನೇಆರೋಪಿತರು ಅಲ್ಲಿಗೆ ಬಂದು ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು 2 ನೇ ಆರೋಪಿ ತನ್ನ ಕೈಯಲ್ಲಿದ್ದ ಕೋಲಿನಿಂದ ಚಾಸಾ.1 ರವರ ಬಲಕಣ್ಣಿಗೆ ಹೊಡೆದು ಅದೇ ಕೋಲಿನಿಂದ 4 ನೇ ಆರೋಪಿ ಚಾಸಾ.1 ರವರ ತಲೆಗೆ ಹೊಡೆದಿದ್ದು ಅಲ್ಲಿಯೇ ಬಿದಿದ್ದ ಇನ್ನೊಂದು ಕೋಲನ್ನು 3 ನೇ ಆರೋಪಿ ತೆಗೆದುಕೊಂಡ ಅವರ ಎಡಭುಜಕ್ಕೆ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ಗಲಾಟೆ ಬಿಡಿಸಲು ಬಂದ ಚಾಸಾ.2 ರವರಿಗೆ 2 ನೇ ಆರೋಪಿ ಕೈಯಿಂದ ಕಪಾಳಕ್ಕೆ ಹೊಡೆದು ಕೆಳಕ್ಕೆ ತಳ್ಳಿ ನೋವುಂಟು ಮಾಡಿ ಸಾಮಾನ್ಯ ಸ್ವರೂಪದ ಗಾಯಮಾಡಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ.3 ರವರು ಹೋಗಿ ಗಲಾಟೆ ಬಿಡಿಸಿದೆವು ಎಂದರೆ ಸರಿಯಲ್ಲ. ಆಗ ಆರೋಪಿತರು ಹೋಗುವಾಗ ನಿಮ್ಮನ್ನು ಸುಮ್ಮನೆ ಬಿಡವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ ಈ ಕುರಿತು ಚಾಸಾ.1 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು ಎಂದರೆ ಸರಿಯಲ್ಲ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ನಿರಾಕರಿಸಿದ್ದರಿಂದ ಹೇಳಿಕೆ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ಊರಿನವರಾಗಿದ್ದರಿಂದ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಕೆ ಹೆಚ್ ಎ ವಕೀಲರಿಂದ-ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ , ಹಿರಿಯೂರು